ಸಂಪುಟ : 40 ಸಂಚಿಕೆ 138 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 14 ಜೂನ್ 2017 ಬುಧವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಜಂತಕಲ್ ಮೈನಿಂಗ್ ಪ್ರಕರಣ: ಹೆಚ್‌ಡಿಕೆ ನಿರೀಕ್ಷಣಾ ಜಾಮೀನು ಅರ್ಜಿ ವಜಾ

ವಿವರ : ಪುಟ 5



ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಇಂಗ್ಲೆಂಡ್-ಪಾಕಿಸ್ತಾನ ನಡುವೆ ಮೊದಲ ಸೆಮಿಫೈನಲ್ ಪಂದ್ಯ

ಐಸಿಸಿ ಏಕದಿನ ರ್‍ಯಾಂಕಿಂಗ್ ಪ್ರಕಟ: ವಿರಾಟ್ ಕೊಹ್ಲಿ ನಂ.1 ಬ್ಯಾಟ್ಸ್‌ಮನ್

ವಿವರ : ಪುಟ 5



₹55 Discount Per Gram
Gold 916 ₹ 2730/-
Silver ₹ 40200/-
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

# ಕುಡಿಯುವ ನೀರಿನ ಬಗ್ಗೆ ಬೇಜವಾಬ್ದಾರಿ

## ಗುಣಮಟ್ಟದ ಬಗ್ಗೆ ನಿಯಮಿತ ಪರೀಕ್ಷೆ ನಡೆಸುತ್ತಿಲ್ಲ : ಗಂಭೀರ ಆರೋಪ

**ತುಮಕೂರು**

ಜಿಲ್ಲೆಯಾದ್ಯಂತ ಜನತೆಗೆ ನೀರುಣಿಸುತ್ತಿರುವ ಕುಡಿಯುವ ನೀರಿನ ಜಲಮೂಲಗಳ ನಿಯಮಿತ ಪರೀಕ್ಷೆಯಾಗುತ್ತಿಲ್ಲ.ಹಾಗಾಗಿ ಕಲುಷಿತಗೊಂಡ ಜಲಮೂಲಗಳ ಗಮ್ಯ ಗೊತ್ತಾಗದೆ ಅದೇ ನೀರನ್ನೇ ಸರಬರಾಜು ಮಾಡಿದರೆ ಸಾಂಕ್ರಾಮಿಕ ರೋಗಗಳು ಬರದೆ ಇನ್ನೇನಾಗುತ್ತದೆ ಎಂದು ತುಮಕೂರು ಜಿಲ್ಲಾಪಂಚಾಯಿತ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಜಿ.ಶಾಂತಾರಾಮ ಅಧಿಕಾರಿಗಳ ಮೇಲೆ ಹರಿಹಾಯ್ದರು.

ತುಮಕೂರು ಜಿಲ್ಲಾಪಂಚಾಯತಿ ಅಧ್ಯಕ್ಷರಾದ ಲತಾ ರವಿಕುಮಾರ್ ನೇತೃತ್ವದಲ್ಲಿ ನಡೆದ ಮಾಸಿಕ ಕೆಡಿಪಿ ಸಭೆಯಲ್ಲಿ ಈ ಕುರಿತು ತೀವ್ರತರವಾದ ಚರ್ಚೆಗಳು ನಡೆದವು.ಜಿಲ್ಲೆಯಲ್ಲಿರುವ ಕೊಳವೆ ಬಾವಿಗಳ ನೀರನ್ನು ಜನರಿಗೆ ಸರಬರಾಜು ಮಾಡುವ ಮುನ್ನ ಗುಣಮಟ್ಟದ ಪರೀಕ್ಷೆ ನಡೆಯಬೇಕು.ಒಂದು ವೇಳೆ ನೀರಿನ ಮೂಲವೇನಾದರೂ ಅಪಾಯಕಾರಿ ಲವಣಾಂಶಗಳು ಮತ್ತಿತರ ಕಲುಷಿತ ಪದಾರ್ಥಗಳಿಂದ ಕೂಡಿದ್ದರೆ ಅಂತಹವುಗಳನ್ನು ಬಳಕೆಗೆ ತೆಗೆದುಕೊಳ್ಳಬಾರದು. ಪ್ರತಿ ಮೂರು ತಿಂಗಳಿಗೊಮ್ಮೆ ನಿಯಮಿತವಾಗಿ ನೀರನ್ನು ಪರೀಕ್ಷಿಸಿ ವರದಿ ನೀಡಬೇಕಾದುದು ಕಡ್ಡಾಯ. ಆದರೆ ಇಲಾಖೆಗಳ ಸಮನ್ವಯತೆಯ ಕೊರತೆಯಿಂದಾಗಿ ಈ ಕೆಲಸ ನಡೆಯುತ್ತಿಲ್ಲ, ಕುಡಿಯುವ ನೀರೊದಗಿಸುತ್ತಿರುವ ಕೊಳವೆ ಬಾವಿಗಳ ಪರಿಪೂರ್ಣ ಮಾಹಿತಿಯೂ ಲಭ್ಯವಿಲ್ಲದೇ ಇರುವುದು ದುರದೃಷ್ಟಕರ ಎಂದು ವಿಷಾದಿಸಿದರು.

ಈ ಕುರಿತು ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿ ಡಾ.ರಂಗಸ್ವಾಮಿ, ಜಿಲ್ಲೆಯಲ್ಲಿ ನಮಗಿರುವ ಮಾಹಿತಿಯ ಪ್ರಕಾರ 24ಸಾವಿರ ಕುಡಿಯುವ ನೀರಿನ ತಾಣಗಳಿದ್ದು, ತಿಂಗಳಿಗೊಮ್ಮೆ 8000 ಕೊಳವೆಬಾವಿಗಳ ಪರೀಕ್ಷೆ ಮಾಡಲಾಗುತ್ತಿದೆ. ಪರೀಕ್ಷೆಯ ವರದಿಯನ್ನು ಸ್ಥಳೀಯ ಸಂಸ್ಥೆಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಮತ್ತು ಅನುಪಾಲನಾ ವರದಿಗಳೂ ಸಿಗುತ್ತಿಲ್ಲವೆಂದು ದೂರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಇಓ ಶಾಂತಾರಾಮ, ನಿಯಮಿತ ಪರೀಕ್ಷೆ ನಡೆದ ನಂತರ ಬಂದಿರುವ ಫಲಿತಾಂಶದ ಆಧಾರದ ಮೇಲೆ ಗುಣಮಟ್ಟವನ್ನು ನಿರ್ಧರಿಸಿ ಜಿಲ್ಲಾಪಂಚಾಯಿತ್ತಿಯ ಗಮನಕ್ಕೆ ತರಬೇಕು. ಯೋಗ್ಯವಾಗಿರುವ ತಾಣಗಳನ್ನಷ್ಟೇ ಕುಡಿಯುವ ನೀರಿನ ಮೂಲಗಳನ್ನಾಗಿ ಬಳಸುವಂತೆ ಸೂಚಿಸಿ ಈ ಕೆಲಸವನ್ನು ತಾಲ್ಲೂಕು ಪಂಚಾಯಿತ್ತಿಯ ಕಾರ್ಯನಿರ್ವಹಣಾಧಿಕಾರಿಗಳು ಪಿಡಿಓಗಳ ಮುಖಾಂತರ ಪರಿಣಾಮಕಾರಿಯಾಗಿ ಅನುಸರಣೆ ಮಾಡಬೇಕು ಎಂದು »» 6ನೇ ಪುಟಕ್ಕೆ



### ಪಾಠವೊಂದನ್ನು ಬಿಟ್ಟು ಬೇರೆಲ್ಲಾ ಮಾಡ್ತಾರೆ

ಬಡ್ಡಿ ವ್ಯವಹಾರ ಮಾಡುವುದು, ಚೀಟಿ ವ್ಯವಹಾರ ಮಾಡುವುದು, ತೋಟ ಮಾಡುವುದು, ಟ್ಯಾಕ್ಸಿ ಓಡಿಸೋದು ಇಂತಹ ಎಲ್ಲಾ ಕೆಲಸಗಳ ನಡುವೆ ಪಾಠ ಪ್ರವಚನಗಳನ್ನು ಮಾಡಲು ಶಿಕ್ಷಕರಿಗೆ ಸಮಯ ಇನ್ನೆಲ್ಲಿರುತ್ತದೆ. ವಿಷಯ ಪರಿವೀಕ್ಷಕರು ಮತ್ತು ಕ್ಷೇತ್ರ ಮಟ್ಟದ ಅಧಿಕಾರಿಗಳು ಸರಿಯಾಗಿ ಕರ್ತವ್ಯಪಾಲನೆ ಮಾಡದ ಕಾರಣ ವರ್ಷದಿಂದ ವರ್ಷಕ್ಕೆ ಫಲಿತಾಂಶದ ಅವರೋಹಣ ಕಾಣುತ್ತಿದೆ. ಈ ವರ್ಷ ಸರಿಸುಮಾರು 10 ಸಾವಿರ ಮಕ್ಕಳು ಅನುತ್ತೀರ್ಣರಾಗಿದ್ದಾರೆ. ಅವರೆಲ್ಲರೂ ಹೆಚ್ಚೂ ಕಡಿಮೆ ಸರ್ಕಾರಿ ಶಾಲೆಯ ಮಕ್ಕಳೇ. ಇಂತಹ ದಮನಿತ ವರ್ಗದ ಮಕ್ಕಳ ಬಗೆಗೆ ಅಧಿಕಾರಿಗಳಿಗಿರುವ ಕಾಳಜಿಯನ್ನು ಗಮನಿಸಿದರೆ ಬೇಸರವಾಗುತ್ತದೆ. ಗಣಿತ ಮತ್ತು ಇಂಗ್ಲಿಷ್ ವಿಷಯಗಳಲ್ಲಿಯೇ ಅತಿ ಹೆಚ್ಚು ಜನ ಫೇಲ್ ಆಗಿರುವುದನ್ನು ನೋಡಿದರೆ ಇದಕ್ಕೆ ಸಂಬಂಧಿಸಿದ ವಿಷಯ ಪರಿಣಿತರ ಕ್ರಿಯಾಲೋಪ ಎದ್ದು ಕಾಣುತ್ತದೆ.

-ಕೆ.ಜಿ.ಶಾಂತಾರಾಮ, ಸಿಇಓ

## ಡಿಸೆಂಬರ್ ವೇಳೆಗೆ ಸಾಲ ಮನ್ನಾ !

**ಬೆಂಗಳೂರು**

ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರ ಸೂಚನೆಯಂತೆ ರೈತರು ಪಡೆದಿರುವ ಕೃಷಿ ಸಾಲವನ್ನು ಡಿಸೆಂಬರ್ ವೇಳೆಗೆ ಮನ್ನಾ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ದೇಶಿಸಿದ್ದಾರೆ.

ರಾಹುಲ್‌ಗಾಂಧಿ ತಮ್ಮನ್ನು ಭೇಟಿಮಾಡಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ವಿಷಯ ಕುರಿತು ಕೇಳಿದಾಗ ಡಿಸೆಂಬರ್‌ನಲ್ಲಿ ಸಾಲ ಮನ್ನಾ ಮಾಡುವುದಾಗಿ ತಿಳಿಸಿದ್ದಾರೆ. ಡಿಸೆಂಬರ್‌ಗೂ ಮುಂಚೆ ತೀರ್ಮಾನ ಕೈಗೊಂಡಲ್ಲಿ ರಾಜಕೀಯವಾಗಿ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಹೀಗಾಗಿ ಡಿಸೆಂಬರ್‌ನಲ್ಲಿ ನಿರ್ಧಾರ ಕೈಗೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ. ಉನ್ನತ ಮೂಲಗಳು ಈ ವಿಷಯವನ್ನು ತಿಳಿಸಿದ್ದು, ದೇಶಾದ್ಯಂತ ಎಲ್ಲ ರಾಜ್ಯಗಳು ರೈತರ ಸಾಲ ಮನ್ನಾ ಮಾಡುವಂತೆ ಆಗ್ರಹಿಸುತ್ತಿರುವ ರಾಹುಲ್‌ಗಾಂಧಿ ಮಧ್ಯಪ್ರದೇಶದಲ್ಲೂ ಈ ಕುರಿತು ಅಲ್ಲಿನ ಸರ್ಕಾರವನ್ನು ನೇರವಾಗಿ ಒತ್ತಾಯಿಸಿದ್ದರು.

ರಾಹುಲ್‌ಗಾಂಧಿ ಅವರ ಒತ್ತಾಯದ ಹಿನ್ನೆಲೆಯಲ್ಲಿ ರಾಜ್ಯದ ಬಿಜೆಪಿ ನಾಯಕರು ಈ ಕುರಿತು ವಿಧಾನಮಂಡಲ ಅಧಿವೇಶನದಲ್ಲಿ ಗಲಭೆ ಮಾಡಿದ್ದಲ್ಲದೆ ನಿಮ್ಮ ನಾಯಕರು ರೈತರ ಸಾಲ ಮನ್ನಾ ಕುರಿತು ಒತ್ತಾಯ ಮಾಡುತ್ತಿದ್ದರೆ ನೀವು ಅದನ್ನು ನಿರ್ಲಕ್ಷಿಸುತ್ತಿದ್ದೀರಿ ಎಂದು ಟೀಕೆ ಮಾಡಿದ್ದರು. ಮೂಲಗಳ ಪ್ರಕಾರ ಸೋಮವಾರ ಕರ್ನಾಟಕಕ್ಕೆ ಬಂದ ಸಂದರ್ಭದಲ್ಲಿ ರಾಹುಲ್‌ಗಾಂಧಿ ಅವರು ಸಿಎಂ ಸಿದ್ಧರಾಮಯ್ಯ ಅವರ ಬಳಿ ಈ ಕುರಿತು ಪ್ರಸ್ತಾಪಿಸಿದ್ದಾರೆ.

ಕೇಂದ್ರ ಸರ್ಕಾರ ಏನು ಮಾಡುತ್ತದೆ ಎಂಬುದನ್ನು ಆಮೇಲೆ ನೋಡೋಣ. ಮೊದಲು ದೇಶದ ಬಲಿಷ್ಟ ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿರುವಾಗ ರೈತರ ಸಾಲ ಮನ್ನಾ ಆಗಬೇಕಿರುವುದು ಇಲ್ಲಿ. ಕರ್ನಾಟಕದಲ್ಲಿ ಸಾಲ ಮನ್ನಾ ಆಗದಿದ್ದರೆ ದೇಶದ ಜನರ ಮುಂದೆ ನಾವು ಉತ್ತರ ಹೇಳಲು ಸಾಧ್ಯವಿಲ್ಲ.

ನನಗೆ ನೀವು ನೀಡಿರುವ ಮಾಹಿತಿಯ ಪ್ರಕಾರ ಹದಿನೈದರಿಂದ ಹದಿನೆಂಟು ಸಾವಿರ ಕೋಟಿ ರೂಗಳಷ್ಟು ಕೃಷಿ ಸಾಲವನ್ನು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಮನ್ನಾ ಮಾಡಬೇಕಿದೆ.ಮೊದಲು ಆ ಕೆಲಸ ಮಾಡಿ ಎಂದು ರಾಹುಲ್‌ಗಾಂಧಿ ಹೇಳಿದರೆನ್ನಲಾಗಿದೆ.

ಈ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಕುರಿತು ಮತ್ತಷ್ಟು ವಿವರ ನೀಡಿದ ಸಿದ್ಧರಾಮಯ್ಯ ಈಗಾಗಲೇ ಸಾಲ ಮನ್ನಾ ಕುರಿತು ಒಂದು ಹಂತದ ಚರ್ಚೆ ಮುಗಿಸಿದ್ದು ಅದರಿಂದ ಬೊಕ್ಕಸದ ಮೇಲಾಗುವ ಹೊರೆಯನ್ನು ಹೇಗೆ ಭರಿಸಬೇಕು ಎಂಬ ಕುರಿತು ನಿರ್ಧಾರಕ್ಕೆ ಬರಲಾಗಿದೆ. ಆದರೆ ಈಗ ಹಣಕಾಸು ವರ್ಷ ಪ್ರಾರಂಭವಾಗಿದೆ. ಹೀಗಿರುವಾಗ ಜನರ ಮೇಲೆ ಯಾವುದೇ ಹೊಸ »» 6ನೇ ಪುಟಕ್ಕೆ

## ಗುಬ್ಬಿಯಲ್ಲಿ ಸರ್ಕಾರಿ ಐಟಿಐ ಕಾಲೇಜು ಆರಂಭ

**ಬೆಂಗಳೂರು**

ಪ್ರಸಕ್ತ ಸಾಲಿನಿಂದಲೇ ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಸರಕಾರಿ ಐಟಿಐ ಕಾಲೇಜು ಕಾರ್ಯಾರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಶಾಸಕ ಶ್ರೀನಿವಾಸ್ ಪ್ರಶ್ನೆಗೆ ಉತ್ತರಿಸಿದ ಸಿದ್ದರಾಮಯ್ಯ, ಯಾವ ತಾಲ್ಲೂಕಿನಲ್ಲಿ ಸರಕಾರಿ ಅಥವಾ ಖಾಸಗಿ ಐಟಿಐ ಇಲ್ಲವೋ ಅಲ್ಲಿ ಐಟಿಐ ಆರಂಭಿಸಲು ಸರಕಾರ ಸಿದ್ಧವಿದೆ. ಮುಂದಿನ ವಾರ ಸಚಿವ ಸಂಪುಟದಲ್ಲಿ ಈ ವಿಷಯ ಪ್ರಸ್ತಾಪವಾಗಲಿದ್ದು ಅನುಮತಿ ನೀಡಲಾಗುವುದು. ಐಟಿಐಗೆ ಜಾಗ ನೀಡಲು ಜಿಲ್ಲಾಧಿಕಾರಿಗಳ ಜತೆ ಚರ್ಚಿಸಿ ಎಂದು ಶಾಸಕರಿಗೆ ಸಲಹೆ ನೀಡಿದರು.

## ರೈತರ ಖಾತೆಗೆ ಹಾಲಿನ ಪ್ರೋತ್ಸಾಹ ಧನ

**ಬೆಂಗಳೂರು**

ಹಾಲಿಗೆ ನೀಡುವ ಪ್ರೋತ್ಸಾಹ ಧನವನ್ನು ಇನ್ನು ಮುಂದೆ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಪಶುಸಂಗೋಪನಾ ಸಚಿವ ಎ. ಮಂಜು ವಿಧಾನಪರಿಷತ್ತಿಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಕಲಾಪದ ವೇಳೆ ಜೆಡಿಎಸ್ ಸದಸ್ಯ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈವರೆಗೆ 8.49 ಫಲಾನುಭವಿಗಳಿಗೆ ಪ್ರೋತ್ಸಾಹ ಧನವನ್ನು ನೀಡಬೇಕು. ಆದರೆ ಬಹುತೇಕ ರೈತರ ಬ್ಯಾಂಕ್ ಖಾತೆಗಳು ಆಧಾರ್‌ಗೆ ಜೋಡಣೆಯಾಗಿಲ್ಲ, ಹಾಗಾಗಿ ಕೆಲ ಒಕ್ಕೂಟಗಳಲ್ಲಿ ಪ್ರೋತ್ಸಾಹ ಧನ ರೈತರಿಗೆ ತಲುಪಿಲ್ಲ ಎಂದು ಹೇಳಿದರು. ಪ್ರಸ್ತುತ ಹಾಲಿಗೆ ನೀಡಲಾಗುವ ಪ್ರೋತ್ಸಾಹ »» 5ನೇ ಪುಟಕ್ಕೆ

## ಹೊಸ ಠಾಣೆಗಳ ನಿರ್ಮಾಣವಿಲ್ಲ

**ಬೆಂಗಳೂರು**

ರಾಜ್ಯದಲ್ಲಿ ಅಪರಾಧಗಳ ಸಂಖ್ಯೆಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳುತ್ತಿದೆಯೇ ಹೊರತು ಹೊಸ ಹೊಸ ಪೊಲೀಸ್ ಠಾಣೆಗಳನ್ನು ನಿರ್ಮಿಸಲು ಸರ್ಕಾರ ಆತುರ ತೋರುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ವಿಧಾನಸಭೆಗೆ ತಿಳಿಸಿದ್ದಾರೆ.

ರಾಜ್ಯದಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ನಿರ್ಮಿಸಬೇಕು. ಆ ಮೂಲಕ ಜನಸಾಮಾನ್ಯರಿಗೆ ಮತ್ತಷ್ಟು ಭದ್ರತೆ ಒದಗಿಸಬೇಕು. ಈ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಬಿಜೆಪಿ ಸದಸ್ಯ ಸಿ.ಟಿ.ರವಿ ಅವರು ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಿದ್ಧರಾಮಯ್ಯ, ನಮ್ಮ ಗುರಿ ಅಪರಾಧಗಳ ಸಂಖ್ಯೆ ಕಡಿಮೆಯಾಗಬೇಕು ಎಂಬುದೇ ಹೊರತು ಅಪರಾಧಗಳ ಸಂಖ್ಯೆ ಜಾಸ್ತಿಯಾಗಬೇಕು ಎಂದಲ್ಲ.ಹೊಸ ಹೊಸ ಠಾಣೆಗಳನ್ನು ನಿರ್ಮಿಸುತ್ತಾ ಹೋದರೆ ಇದು ಹೇಗೆ ಸಾಧ್ಯ?ಅಂತ ಪ್ರಶ್ನಿಸಿದರು. ಈ ಹಂತದಲ್ಲಿ ಮಾತನಾಡಿದ ಸಿ.ಟಿ.ರವಿ,ನೀವು ಹೇಳಿದ ಪ್ರಕಾರ ಪೊಲೀಸ್ ಠಾಣೆಗಳನ್ನು ಕಡಿಮೆ ಮಾಡುತ್ತಾ ಹೋದರೆ ನಾಳೆ ಲಾಯರುಗಳ ಕತೆ ಏನಾಗಬೇಕು?ಅವರೇನು ಕೆಲಸ ಮಾಡಬೇಕು?ಎಂದಾಗ ಸಿಎಂ ಸಿದ್ಧರಾಮಯ್ಯ ಗರಂ ಆದರು.

ಹಿಂದೆ ಸಾರಾಯಿ ನಿಷೇಧವಾಯಿತು.ಹಾಗಂತ ಸಾರಾಯಿ ಮಾರಾಟಗಾರರು ಸತ್ತಿದ್ದಾರಾ?ಅಪರಾಧಗಳು ಕಡಿಮೆಯಾದರೆ ಲಾಯರುಗಳು ಏನು ಮಾಡಬೇಕು?ಅಂತ ಕೇಳುತ್ತೀರಲ್ಲ?ಅವರಿಗಾಗಿ ಅಪರಾಧ ಪ್ರಕರಣಗಳು ಜಾಸ್ತಿಯಾಗಬೇಕೇ?ಎಂದು ಅವರು ಪ್ರಶ್ನಿಸಿದರು.

ಮುಂದುವರಿದು ಮಾತನಾಡಿ,ಹೊಸ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿಲ್ಲ, ಯಾವ ಕಾರಣಕ್ಕೂ ಇದಕ್ಕೆ ನಾವು ಕೈ ಹಾಕುವುದಿಲ್ಲ, ಬದಲಿಗೆ ಅಪರಾಧಗಳ ಸಂಖ್ಯೆಯನ್ನು ಕಡಿಮೆ ಮಾಡಲು ಯತ್ನಿಸುತ್ತೇವೆ ಎಂದರು.

## ಜಾತಿ ಪಕ್ಷ ಮರೆತು ಕಾರ್ಯ ನಿರ್ವಹಿಸೋಣ :ಕೆ.ಎನ್.ರಾಜಣ್ಣ

**ಮಧುಗಿರಿ**

ತಾಲ್ಲೂಕಿನ ಸಮಗ್ರ ಅಭಿವೃದ್ಧಿಗಾಗಿ ಜಾತಿ ಪಕ್ಷ ಮರೆತು ಕಾರ್ಯ ನಿರ್ವಹಿಸೋಣ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನದಾಗಿ ಅನುದಾನ ತಂದು ಗ್ರಾಮಗಳನ್ನು ಅಭಿ ವೃದ್ಧಿ ಪಡಿಸೋಣ, ಮತದಾರರು ಹಾಗೂ ಕಾರ್ಯಕರ್ತರು ಅಭಿವೃದ್ಧಿಪರ ಕೈ ಜೋಡಿ ಸುವಂತೆ ಕಾರ್ಯಕರ್ತರಿಗೆ ಶಾಸಕ ಕೆ.ಎನ್.ರಾಜಣ್ಣ ಕರೆ ನೀಡಿದರು.

ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಕವಣದಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಡವರ ಹಾಗೂ ಹಿಂದುಳಿದವರ ಪರವಾಗಿದ್ದಾರೆ. ಇವರ ಸಹಕಾರದಿಂದಾಗಿ ಇಂದು ತಾಲ್ಲೂಕು ಅಭಿವೃದ್ದಿಯತ್ತಾ ಮುಖ ಮಾಡಿದೆ. ನಿವೃತ್ತ ಶಿಕ್ಷಕರಾದ ಲಕ್ಷ್ಮೀ ನಾರಾಯಣಪ್ಪ ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದ್ದವರು ಕಾರಣಾಂತರದಿಂದ ಪಕ್ಷ ತೊರೆದು ಜೆಡಿಎಸ್‌ಗೆ ಸೇರಿದ್ದರು. ಅವರು ಮತ್ತೆ ನಮ್ಮ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಸಂತೋಷದ ವಿಷಯ. ನಮ್ಮ ಪಕ್ಷದಲ್ಲಿನ ಕಾರ್ಯಕರ್ತರನ್ನು ಒಂದು ಕುಟುಂಬದ ಸದಸ್ಯರಂತೆ ಹಾಗೂ ಗೌರವದಿಂದ ಕಾಣಲಾಗುವುದು ಎಂದರು.

ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದ ಮುದ್ದಪ್ಪನಪಾಳ್ಯದ ನಿವೃತ್ತ ಶಿಕ್ಷಕರಾದ ಲಕ್ಷ್ಮೀನಾರಾಯಣ್ ಮಾತನಾಡಿ ಜೆಡಿಎಸ್ ಪಕ್ಷದಲ್ಲಿ ಉಸಿರು ಕಟ್ಟಿದ ವಾತಾವರಣ ಇದ್ದು ನನಗೆ ಬೇಸರ ತಂದಿದೆ. ಆದ್ದರಿಂದ ನಾನು ಕೆ.ಎನ್. ರಾಜಣ್ಣನವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ನನ್ನ ದೃಢ ನಿರ್ಧಾರದಿಂದ ನಾನು ರಾಜಣ್ಣನವರ ಸಮ್ಮುಖದಲ್ಲಿ ಇಂದು ಕಾಂಗ್ರೆಸ್ ಪಕ್ಷವನ್ನು ಸೇರುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಕಾಯ ವಾಚ ಮನಸ್ಸಿನಿಂದ ರಾಜಣ್ಣನವರಿಗೆ ಬೆಂಬಲಿಸಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟೂ ಬಲಪಡಿಸುತ್ತೇನೆ ಎಂದರು.ರಂಗನಾಥ್ ರಘು, ಪರಶುರಾಂ, ಗೋವಿಂದಪ್ಪ, ಕೋಟಪ್ಪ ಲಕ್ಷ್ಮೀಪತಿ, ನಾಗೇಶ್ ಗೌಡ, ರಾಮಚಂದ್ರಪ್ಪ, ಲಕ್ಷ್ಮೀನಾರಾಯಣಚಾರ್ ಸುಮಾರು 20 ಕ್ಕೂ ಹೆಚ್ಚು ಮಂದಿ ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ತಾಪಂ ಸದಸ್ಯರಾದ ಪ್ರಸನ್ನಕುಮಾರ್, ಗ್ರಾಪಂ ಸದಸ್ಯ ಪದ್ಮಣ್ಣ, ಕೆ.ನಾರಾಯಣಪ್ಪ, ಸಿದ್ದಗಂಗಮ್ಮ ನಾಗರಾಜು, ಮಂಜುಳ ರಮೇಶ್, ನಾಗರಾಜು, ದೊಡ್ಡತಿಮ್ಮಯ್ಯ, ಎಂ.ಶಿವಣ್ಣ ಜಿ.ಕೆ.ರಾಮಣ್ಣ, ನಟರಾಜು ಹನುಮಂತರಾಯಪ್ಪ, ಹಿರಿಯ ಮುಖಂಡರಾದ ಗುಟ್ಟೆ ಚಿಕ್ಕರಂಗಪ್ಪ ಮುಂತಾದವರು ಹಾಜರಿದ್ದರು.



ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಕವಣದಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಾಸಕ ಕೆ.ಎನ್. ರಾಜಣ್ಣನವರ ನೇತೃತ್ವದಲ್ಲಿ ಹಲವಾರು ಮುಖಂಡರು ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

> ಜೆಡಿಎಸ್ ಪಕ್ಷದಲ್ಲಿ ಉಸಿರು ಕಟ್ಟಿದ ವಾತಾವರಣ ಇದ್ದು ನನಗೆ ಬೇಸರ ತಂದಿದೆ. ಆದ್ದರಿಂದ ನಾನು ಕೆ.ಎನ್. ರಾಜಣ್ಣನವರ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ನನ್ನ ದೃಢ ನಿರ್ಧಾರದಿಂದ ನಾನು ರಾಜಣ್ಣನವರ ಸಮ್ಮುಖದಲ್ಲಿ ಇಂದು ಕಾಂಗ್ರೆಸ್ ಪಕ್ಷವನ್ನು ಸೇರುತ್ತಿದ್ದೇನೆ.
>
> - ಲಕ್ಷ್ಮೀ ನಾರಾಯಣಪ್ಪ

# ಕಸ ವಿಲೇವಾರಿ ಘಟಕದ ಬಳಿ ಬೀದಿ ನಾಯಿಗಳ ಹಾವಳಿ

## ನಾಯಿಗಳ ದಾಳಿಯಿಂದ 40 ಕುರಿಗಳ ಸಾವು-ಬೂವನಹಳ್ಳಿ ಗ್ರಾಮಸ್ಥರಿಂದ ಪ್ರತಿಭಟನೆ

**ಶಿರಾ**

ಇಲ್ಲಿನ ನಗರಸಭೆಯ ಕಸ ವಿಲೇವಾರಿ ಘಟಕದಲ್ಲಿ ಮೊಕ್ಕಾಂ ಹೂಡಿದ್ದ ಸುಮಾರು 50ಕ್ಕೂ ಹೆಚ್ಚು ನಾಯಿಗಳು ಸಮೀಪದಲ್ಲಿಯೇ ಬೀಡು ಬಿಟ್ಟಿದ್ದ ಕುರಿಗಳ ಹಿಂಡಿನ ಮೇಲೆ ದಾಳಿ ನಡೆಸಿದ ಪರಿಣಾಮ 40 ಕುರಿಗಳು ಸಾವನ್ನಪ್ಪಿರುವ ಘಟನೆ ಮಂಗಳವಾರ ಬೆಳಿಗ್ಗೆ ನಡೆದಿದೆ.

### ಮುಖ್ಯಾಂಶಗಳು

- ಸಿರಾದಲ್ಲಿ ಕುರಿಗಳ ಮೇಲೆ ನಾಯಿಗಳ ದಾಳಿ
- 40 ಕುರಿಗಳನ್ನು ಕೊಂದ ಬೀದಿ ನಾಯಿಗಳು
- ನಗರಸಭೆಯ ಕಸ ವಿಲೇವಾರಿ ಘಟಕದಲ್ಲಿ ಘಟನೆ
- ಕೋಳಿ ಮಾಂಸದ ತ್ಯಾಜ್ಯ ವಸ್ತುವಿನ ದುರ್ನಾತ
- ಮಾಸದ ರುಚಿ ಕಂಡು ಬೀಡು ಬಿಟ್ಟಿರುವ ನಾಯಿಗಳು
- ಕುರಿಗಾಹಿ ಗಳಿಂದ ಕಸ ವಿಲೇವಾರಿ ಘಟಕದಲ್ಲಿ ಪ್ರತಿಭಟನೆ

ನಗರದ ಹೊರ ವಲಯವಾದ ಬೂವನಹಳ್ಳಿ ಸರ್ವೆ ನಂಬರ್ ಜಮೀನಿನಲ್ಲಿ ಶಿರಾ ನಗರಸಭೆಯಿಂದ ನಿರ್ಮಾಣ ಮಾಡಲಾದ ಕಸ ವಿಲೇವಾರಿ ಘಟಕವಿದ್ದು ಈ ಘಟಕಕ್ಕೆ ದಿನ ನಿತ್ಯವೂ ನಗರದಲ್ಲಿ ಕ್ರೊಢೀಕರಣಗೊಂಡ ಹಸಿ ಕಸ ಮತ್ತು ಒಣಕಸವನ್ನು ನಗರಸಭೆಯಿಂದ ಕಸವಿಲೇವಾರಿ ಘಟಕಕ್ಕೆ ಸುರಿಯಲಾಗುತ್ತದೆ. ಇದರೊಟ್ಟಿಗೆ ಕೋಳಿ ಮಾಂಸದ ತ್ಯಾಜ್ಯ ವಸ್ತುಗಳನ್ನು ಘಟಕಕ್ಕೆ ತಂದು ಹಾಕಲಾಗುತ್ತಿದ್ದು ಕೋಳಿ ಮಾಸದ ರುಚಿ ಕಂಡ ಸುಮಾರು 100ಕ್ಕೂ ಹೆಚ್ಚು ನಾಯಿಗಳು ಸಾರ್ವಜನಿಕರಿಗೂ, ಪ್ರಾಣಿಗಳಿಗೂ ದಿನ ನಿತ್ಯ ಕಾಟ ಕೊಡುತ್ತಿವೆ ಎನ್ನಲಾಗಿದೆ.

ಕಸ ವಿಲೇವಾರಿ ಘಟಕದ ಬಳಿಯ ಖಾಲಿ ಜಮೀನಿನಲ್ಲಿ ಬೂವನಹಳ್ಳಿ ಗ್ರಾಮದ ರೈತರು ತಮ್ಮ ಕುರಿಗಳನ್ನು ಮಂದೆ ಕಾಯಲು ಬಿಟ್ಟಿದ್ದರು. ಕುರಿಗಳ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿದ ಪರಿಣಾಮ ಸುಮಾರು 40 ಕುರಿಗಳು ಮೃತಪಟ್ಟಿವೆ ಎನ್ನಲಾಗಿದೆ.

ಬೂವನಹಳ್ಳಿ ಗ್ರಾಮದ ಕುರಿಗಾಹಿಗಳಾದ ಚಂದ್ರಪ್ಪನ 15 ಕುರಿಗಳು, ಭೈರಪ್ಪ 1, ಮಹಂತೇಶ್ 15, ಶಿವಣ್ಣ 2, ನಾಗರಾಜು 3, ತಿಮ್ಮರಾಜು ಮತ್ತು ಸಿದ್ದೇಶ್ ಅನ್ನುವವರ 2 ಸೇರಿದಂತೆ ಸುಮಾರು 40ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿವೆ.

ತಮ್ಮ ಕಣ್ಣು ಮುಂದೆಯೇ ನಾಯಿಗಳ ಹಿಂಡು ಕುರಿಗಳನ್ನು ಕಚ್ಚಿ ಕೊಂದಿರುವುದನ್ನು ಕಂಡು ಕುಪಿತಗೊಂಡ ಕುರಿಗಾಹಿಗಳು ಮತ್ತು ಬೂವನಹಳ್ಳಿ ಗ್ರಾಮಸ್ಥರು ಕಸ ವಿಲೇವಾರಿ ಘಟಕದ ಮುಂದೆ ಬೆಳ್ಳಂಬೆಳಿಗ್ಗೆಯೇ ಪ್ರತಿಭಟನೆ ನಡೆಸಿದರು. ನಗರದಿಂದ ಕಸವನ್ನು ವಿಲೇವಾರಿ ಮಾಡಲು ಘಟಕಕ್ಕೆ ತರುತ್ತಿದ್ದ ಟ್ರ್ಯಾಕ್ಟರ್ ಹಾಗೂ ಲಗೇಜ್ ಆಟೋಗಳನ್ನು ತಡೆಗಟ್ಟಿ ಕಸ ಹಾಕದಂತೆ ಪ್ರತಿಭಟಿಸಿದರು.

ಶಿರಾ ಎ.ಪಿ.ಎಂ.ಸಿ. ಮಾಜಿ ಸದಸ್ಯ ಬಂಡೇ ರಾಮಕೃಷ್ಣ ಮಾತನಾಡಿ ಕಳೆದ 8 ವರ್ಷಗಳಿಂದಲೂ ಕಸ ವಿಲೇವಾರಿ ಘಟಕದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಘಟಕದ ಬಳಿಯೇ ಮೊರಾರ್ಜಿ ಶಾಲೆಗಳಿವೆ. ಶಾಲಾ ಮಕ್ಕಳು ಓಡಾಡುವುದೂ ಕಷ್ಟವಾಗಿದೆ. ಘಟಕದ ದುರ್ವಾಸನೆಯಿಂದ ಈ ಭಾಗದ ಜನತೆಯ ಆರೋಗ್ಯವೂ ಹದ ಗೆಡುತ್ತಿದ್ದು ಕಸವಿಲೇವಾರಿ ಘಟಕ ಬದಲಾವಣೆ ಮಾಡಬೇಕು ಎಂದರು.

ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಸತ್ಯಪ್ರಕಾಶ್ ಮಾತನಾಡಿ ಕೋಟಿಗಟ್ಟಲೆ ಹಣ ವ್ಯಯ ಮಾಡಿ ನಿರ್ಮಿಸಿದ ಕಸ ವಿಲೇವಾರಿ ಘಟಕದಲ್ಲಿ »» 6ನೇ ಪುಟಕ್ಕೆ



## ವಿದ್ಯುತ್ ಸರಬರಾಜು ತಿಳಿಯಲು ನೂತನ ವ್ಯವಸ್ಥೆ

**ಬೆಂಗಳೂರು**

ರಾಜ್ಯದ ಯಾವ ಭಾಗದಲ್ಲಿ ಎಷ್ಟು ಪ್ರಮಾಣದ ವಿದ್ಯುತ್ ಸರಬರಾಜಾಗುತ್ತಿದೆ ಎಂಬುದನ್ನು ಅರಿಯುವ ನೂತನ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದ್ದು, ಇದರಿಂದ ಸಾಕಷ್ಟು ಅನುಕೂಲವಾಗಿದೆ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ವಿಧಾನಪರಿಷತ್ತಿಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಸದಸ್ಯ ಪ್ರದೀಪ್ ಶೆಟ್ಟರ್ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, ಪ್ರತಿ ಫೀಡರ್‌ನಿಂದ ಎಷ್ಟು ಪ್ರಮಾಣದ ವಿದ್ಯುತ್ ಸರಬರಾಜಾಗುತ್ತಿದೆ ಎಂಬುದನ್ನು ಪತ್ತೆ ಮಾಡುವಂತಹ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. ರಾಜ್ಯದ ಎಲ್ಲ ಎಸ್ಕಾಂಗಳಲ್ಲೂ ಇದೇ ವ್ಯವಸ್ಥೆಯನ್ನು ಶೀಘ್ರದಲ್ಲೇ ಜಾರಿಗೆ ಬರಲಿದೆ ಎಂದರು. ಇಂತಹ ವ್ಯವಸ್ಥೆಯಿಂದಾಗಿ ಎಲ್ಲಿ ವಿದ್ಯುತ್ ಬೇಡಿಕೆ ಇದೆ. ಎಲ್ಲಿ ಕಡಿಮೆ ಬೇಡಿಕೆ ಇದೆ ಎಂಬುದನ್ನು ಅರಿಯಲು ಸಾಧ್ಯವಾಗಲಿದೆ. ಇದರ ಜತೆಗೆ ಪ್ರತಿ ಫೀಡರ್‌ನಿಂದ ಸರಬರಾಜಾ ಗುತ್ತಿರುವ ವಿದ್ಯುತ್ ಪ್ರಮಾಣದ ಕುರಿತು ಶಾಸಕರಿಗೆ ಮಾಹಿತಿ ನೀಡಬೇಕು ಎಂದು ಎಲ್ಲ ಎಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

## ಬ್ಯಾಂಕ್‌ಗಳಿಗೆ ಹಣ ಪಾವತಿಸಲು ಹಿಂದೇಟು ಸಾಲ ಮನ್ನಾ ನಿರೀಕ್ಷೆಯಲ್ಲಿರುವ ರೈತಾಪಿ ವರ್ಗ

**ಬೆಂಗಳೂರು**

ಸಾಲ ಮನ್ನಾ ನಿರೀಕ್ಷೆಯಲ್ಲಿರುವ ರೈತರು, ಸಾಲ ಮರುಪಾವತಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಅಷ್ಟೇ ಅಲ್ಲ ಬ್ಯಾಂಕ್‌ಗಳು ತಮ್ಮ ಖಾತೆಯಲ್ಲಿರುವ ಹಣವನ್ನು ಎಲ್ಲಿ ಕಡಿತ ಮಾಡಿಕೊಳ್ಳುತ್ತಾರೆ ಎಂಬ ಭಯದಿಂದ ಇದ್ದ ಅಲ್ಪಸ್ವಲ್ಪ ಹಣವನ್ನೆಲ್ಲಾ ಹಿಂಪಡೆಯುತ್ತಿರುವುದು ಕಂಡುಬಂದಿದೆ.

ರೈತರು ಬಾಕಿ ಹಣ ಮರುಪಾವತಿಸಲು ಹಿಂದೇಟು ಹಾಕುತ್ತಿರುವುದರಿಂದ ಬ್ಯಾಂಕುಗಳ ಸಾಲದ ಮರುಪಾವತಿ ಪ್ರಮಾಣ ಕಡಿಮೆಯಾಗಿದೆ. ಒಂದು ತಿಂಗಳಲ್ಲೇ ಮರುಪಾವತಿ ಪ್ರಮಾಣ ಶೇಕಡಾ 50ರಷ್ಟು ಇಳಿಕೆಯಾಗಿದೆ.

ಒಟ್ಟಾರೆ ದೇಶದಲ್ಲಿ ಬ್ಯಾಂಕುಗಳಲ್ಲಿ ರೈತರ ಸಾಲ 10 ಲಕ್ಷ ಕೋಟಿ ರೂ. ಇದೆ. ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಸಭೆ ನಡೆಸಿ ರೈತರ ಸಾಲ ಮನ್ನಾ ಹೊರೆಯನ್ನು ಆಯಾ ರಾಜ್ಯಗಳೇ ಭರಿಸಬೇಕು ಎಂದು ಸ್ಪಷ್ಟಪಡಿಸಿದ್ದಾರೆ. ಇದು ರೈತರ ಆಸೆಗೆ ತಣ್ಣೀರೆರಚಿದೆ. ಆದರೂ ಆಯಾ ರಾಜ್ಯಗಳು ಸಾಲ ಮನ್ನಾ ಮಾಡಬಹುದು ಎಂಬ ಆಸೆ ರೈತರಲ್ಲಿ ಇನ್ನೂ ಮನೆ ಮಾಡಿದೆ.

ಬ್ಯಾಂಕುಗಳು ನಮ್ಮ ಸಾಲದ ಹಣ ಖಾತೆಗಳಿಂದ ಕಳೆದುಕೊಳ್ಳುತ್ತಾರೆ ಎಂಬ ಹೆದರಿಕೆಯಿಂದ ರೈತರು ತಮ್ಮ ಖಾತೆಗಳಲ್ಲಿರುವ ಹಣವನ್ನು ಹಿಂದಕ್ಕೆ ಪಡೆಯುತ್ತಿದ್ದಾರೆ ಎಂದು ಹಿರಿಯ ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆಂಧ್ರಪ್ರದೇಶ, ತೆಲಂಗಾಣ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಈಗಾಗಲೇ ರೈತರ ಸಾಲ ಮನ್ನಾ ಘೋಷಿಸಲಾಗಿದೆ. ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಲ್ಲೂ ರೈತರ ಸಾಲ ಮನ್ನಾಕ್ಕೆ ತೀವ್ರ ಒತ್ತಡ ಇದೆ.

ಆಂಧ್ರದಲ್ಲಿ ರೈತರ ಬಾಕಿ ಹಣ ಪಡೆದುಕೊಳ್ಳುವುದು ಬಹಳ ಕಷ್ಟ ಎಂದು ಆಂಧ್ರ ಪ್ರದೇಶದ ಎರಡು ಪ್ರಮುಖ ಬ್ಯಾಂಕುಗಳ ಅಧ್ಯಕ್ಷರು ಹೇಳಿದ್ದಾರೆ. 2014ರ ವಿಧಾನಸಭಾ ಚುನಾವಣೆಯ ಬಳಿಕ ಅಧಿಕಾರಕ್ಕೆ ಬಂದ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಸರ್ಕಾರ ಒಟ್ಟು 40 ಸಾವಿರ ಕೋಟಿ ರೂ.ರೈತರ ಸಾಲವನ್ನು ಮನ್ನಾ ಮಾಡಿದೆ. ಇದರಿಂದ ಬ್ಯಾಂಕುಗಳ ಒಟ್ಟಾರೆ ಸಾಲ ನೀಡುವ ಸಾಮರ್ಥ್ಯವೂ ಕಡಿಮೆಯಾಗಿದೆ ಎಂದು ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಎಸ್‌ಬಿಐನ ಅಧ್ಯಕ್ಷೆ ಅರುಂಧತಿ ಭಟ್ಟಾಚಾರ್ಯ ಕೂಡ ಸಾಲ ಮನ್ನಾದಿಂದ ಬ್ಯಾಂಕ್ ವ್ಯವಹಾರಕ್ಕೆ ತೊಂದರೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

13-06-2017.indd 2 6/13/2017 11:49:41 PM